## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ: 206/2015 ಸಿಡಬ್ಲೂ: 3 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿ: 05-12-2025

ಹೆಸರು : ದೇವಿಂದ್ರ

ತಂದೆ ಹೆಸರು : ಮರೆಪ್ಪ ಹೆಗ್ಡೆ

ವಯಸ್ಸು : 45 ವರ್ಷ

ಉದ್ಯೋಗ : ಸಮಾಜ ಸೇವಕ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 2 ನನಗೆ ಗೊತ್ತು. ಸದರಿಯವರು ತೀರಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-13 ಎಂದು ಗುರುತಿಸಲಾಯಿತು ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಇನೊಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-14 ಎಂದು ಗುರುತಿಸಲಾಯಿತು ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತು ಹಾಗೂ ದಾಖಲಾತಿಯನ್ನು ವಶಕ್ಕೆ ಪಡೆದುಕೊಂಡಿಲ್ಲ. ನಿ ಪಿ 13 ಮತ್ತು 14 ರಲ್ಲಿ ಇರುವ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ವಾಟೀಸವಾಲು:** ಮಾನ್ಯ ಸ.ಸ.ಅ ರವರಿಂದ:

ದಿ:08-11-2014 ರಂದು ರಾತ್ರಿ 10-45 ಗಂಟೆಯಿಂದ 11-45 ಗಂಟೆಯವರೆಗೆ ಹಾಗೂ ದಿ.09-04-2015 ರಂದು ಮಧ್ಯಾಹ್ನ 12-30 ರಿಂದ 01-30 ವರೆಗೆ ನನ್ನ ಹಾಗು ಚಾಸಾ 2 ರವರ ಸಮಕ್ಷಮದಲ್ಲಿ ಪೋಲೀಸರು ಪಂಚನಾಮೆಯನ್ನು ಮಾಡಿ ನಿ ಪಿ 2 ರಿಂದ 12 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಭಾಗಿಯಾಗಿದ್ದರು ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**ಪಾಟೀಸವಾಲು:** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**